ಮಾನ್ಯ ಆಡಳಿತಗಾರರು ರವರಿಂದ ಕೈಕೊಂಡ್ರುಹಳ್ಳಿ ಕೆರೆ, ಇಬ್ಬಲೂರು ಕೆರೆ ಪರಿಶೀಲನೆ, ವಾರ್ಡ್–190ರಲ್ಲಿ ಹಸಿ ಮತ್ತು ಒಣ ಕಸ ಸಂಗ್ರಹಣೆ ಪರಿಶೀಲನೆ ಹಾಗೂ ವಾರ್ಡ್–174ರ ಸ್ವಚ್ಛಾಗ್ರಹ ಕಲಿಕಾ ಕೇಂದ್ರ ಭೇಟಿ:

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೈಕೊಂಡ್ರುಹಳ್ಳಿ ಕೆರೆ ಮತ್ತು ಇಬ್ಬಲೂರು ಕೆರೆಗಳ ತಪಾಸಣೆಯನ್ನು ಇಂದು ಬೆಳಗ್ಗೆ ಮಾನ್ಯ ಆಡಳಿತಗಾರರು ರವರು ನಡೆಸಿದರು. ತದನಂತರ ವಾರ್ಡ್-190 ಮಂಗಮ್ಮನಪಾಳ್ಯದಲ್ಲಿ ಹಸಿ ಮತ್ತು ಒಣ ತ್ಯಾಜ್ಯ ಸಂಗ್ರಹಣೆ ವಸ್ತುಸ್ಥಿತಿ ಪರಿಶೀಲನೆ ನಡೆಸಿ, ಸ್ವಚ್ಛಾಗ್ರಹ ಕಲಿಕಾ ಕೇಂದ್ರಕ್ಕೆ ಭೇಟಿ ನೀಡಿದರು. ಈ ವೇಳೆ ವಿಶೇಷ ಆಯುಕ್ತರು(ಘನತ್ಯಾಜ್ಯ ನಿರ್ವಹಣೆ) ಶ್ರೀ ರಂದೀಪ್, ವಿಶೇಷ ಆಯುಕ್ತರು(ಯೋಜನೆ) ಶ್ರೀ ಮನೋಜ್ ಜೈನ್, ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರು ಶ್ರೀ ಎಂ.ಆರ್.ವೆಂಕಟೇಶ್, ಜಂಟಿ ಆಯುಕ್ತರು(ಮಹದೇವಪುರ) ಶ್ರೀ ವೆಂಕಟಾಚಲಪತಿ, ಮುಖ್ಯ ಅಭಿಯಂತರರು(ಕೆರೆಗಳು) ಶ್ರೀ ಬಿ.ಟಿ.ಮೋಹನ್ ಕೃಷ್ಣ, ಮುಖ್ಯ ಅಭಿಯಂತರರು(ಎಸ್.ಡಬ್ಲ್ಯು.ಎಂ) ಶ್ರೀ ವಿಶ್ವನಾಥ್, ಮುಖ್ಯ ಅಭಿಯಂತರರು(ಯೋಜನೆ-ಕೇಂದ್ರ) ಶ್ರೀ ರಮೇಶ್, ಮುಖ್ಯ ಅಭಿಯಂತರರಾದ ಶ್ರೀ ಪರಮೇಶ್ವರ್, ಶ್ರೀ ಸಿದ್ದೇಗೌಡ, ಜಲ ಮಂಡಳಿ ಮುಖ್ಯ ಅಭಿಯಂತರರಾದ ಶ್ರೀ ಕುಮಾರನಾಯಕ್ ಹಾಗೂ ಇನ್ನಿತರೆ ಅಧಿಕಾರಿಗಳು ಭಾಗವಹಿಸಿದ್ದರು.

ಕೈಗೊಂಡ್ರುಹಳ್ಳಿ ಕೆರೆ ಮತ್ತು ಇಬ್ಬಲೂರು ಕೆರೆ ತಪಾಸಣೆ:

ಬೆಳ್ಳಂದೂರು ವಾರ್ಡ್-150 ಕೈಗೊಂಡ್ರುಹಳ್ಳಿ ಕೆರೆಯ ಅಭಿವೃದ್ಧಿ ಪರಿಶೀಲನೆ ನಡೆಸಿ ಕೆರೆಯ ಸ್ವಚ್ಛತೆ, ನಿರ್ವಹಣೆ, Pathway ಇನ್ನಿತರೆ ಅಂಶಗಳ ಬಗ್ಗೆ ಪರಿಶೀಲನೆ ನಡೆಸಿದರು. ಈ ಕೆರೆ ಸೇರಿದಂತೆ ಸೌಲ್ ಕೆರೆ ಮತ್ತು ಕಸವನಹಳ್ಳಿ ಕೆರೆಗಳ ನಿರ್ವಹಣೆಯನ್ನು Resident welfare Association ವಹಿಸಿರುವುದಾಗಿ ಮಾಹಿತಿ ನೀಡಿದರು.

ಸದರಿ ಕೆರೆಯ Inlet ನಿಂದ ತ್ಯಾಜ್ಯ ನೀರು ಬರುತ್ತಿರುವುದನ್ನು ಗಮನಿಸಿದ ಆಡಳಿತಗಾರರು, ಈ ಬಗ್ಗೆ ಸ್ಥಳದಲ್ಲಿದ್ದ ಜಲಮಂಡಳಿ ಅಧಿಕಾರಿಗಳಿಂದ ಮಾಹಿತಿ ಕೇಳಿದರು. ಇದಕ್ಕೆ ಉತ್ತಿರಿಸಿದ ಜಲಮಂಡಳಿ ಅಧಿಕಾರಿಗಳು, ಪ್ರಸ್ತುತ ಕಾವೇರಿ 5ನೇ ಹಂತದಲ್ಲಿ ಮನೆಗಳಿಂದ ಹೊರಬರುವ ತ್ಯಾಜ್ಯ ನೀರನ್ನು ಕೊಳವೆಗಳಿಂದ ಹರಿಸಲು Laterals & Trunk Lines ಅಳವಡಿಸುವ ಪ್ರಸ್ತಾವನೆ ಬಗ್ಗೆ ವಿವರಿಸಿ ತಾತ್ಕಾಲಿಕವಾಗಿ ತ್ಯಾಜ್ಯ ನೀರನ್ನು ಕೆರೆಗೆ ನೀರಿನೊಂದಿಗೆ ಮಿಶ್ರಣವಾಗದಂತೆ diversion channel ಅಳವಡಿಸಿರುವ ಬಗ್ಗೆ ಮಾಹಿತಿ ನೀಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಆಡಳಿತಗಾರರು, diversion channel ಅಳವಡಿಸುವುದು ಕೇವಲ ತಾತ್ಕಾಲಿಕ ಪರಿಹಾರವಾಗಿದ್ದು, ಪ್ರತಿ ಕೆರೆಯಲ್ಲಿ ಕನಿಷ್ಠ 1 MLD ಸಾಮರ್ಥ್ಯದ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸುವ ನಿಟ್ಟಿನಲ್ಲಿ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪ್ರತಿ ಕೆರೆಗಳಲ್ಲಿ ನೀರನ್ನು ಮಲಿನವಾಗದಂತೆ ಕ್ರಮವಹಿಸುವ ನಿಟ್ಟಿನಲ್ಲಿ ಜಲಮಂಡಳಿ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ, ಆ ಕೆರೆಯ ಕ್ಯಾಚ್‌ಮೆಂಟ್ ಪ್ರದೇಶದ ಅಧ್ಯಯನ ನಡೆಸಿ, ಸುತ್ತಮುತ್ತಲಿನ ಮನೆಗಳಿಂದ ಹೊರಬರುವ ತಾಜ್ಯ ನೀರಿನ ಅಂದಾಜು ಮಾಡಿ, ಅದಕ್ಕೆ ತಕ್ಕಂತೆ ಒಂದೇ ಮಾದರಿಯ ತ್ಯಾಜ್ಯ ಸಂಸ್ಕರಣಾ ಘಟಕವನ್ನು ಸ್ಥಾಪಿಸಿ, ತ್ಯಾಜ್ಯ ನೀರನ್ನು ಸಂಸ್ಕರಣೆ ಮಾಡುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯಪ್ರವೃತ್ತರಾಗಲು ಮತ್ತು ಈ ಬಗ್ಗೆ ವಿಶೇಷ ಆಯುಕ್ತರು (ಯೋಜನೆ)

ರವರು ಮೇಲ್ವಿಚಾರಣೆ ಮಾಡಲು ಸೂಚಿಸಿದರು. ಈ ರೀತಿ ನಗರದ ವ್ಯಾಪ್ತಿಯಲ್ಲಿರುರುವ ಕೆರೆಗಳಿಗೆ ಒಳಚರಂಡಿ ನೀರು ಸೇರದಂತೆ ತಡೆಗಟ್ಟಲು ಅಲ್ಲಲ್ಲಿ ಬ್ಲಾಕ್‌ಗಳನ್ನು ಗುರುತಿಸಿ ತ್ಯಾಜ್ಯ ಸಂಸ್ಕರಣಾ ಘಟಕವನ್ನು ನಿರ್ಮಾಣ ಮಾಡುವುದರಿಂದ ಕೆರೆಯ ನೀರು ಮಲಿನವಾಗುವುದನ್ನು ತಡೆಯಬಹುದಾಗಿರುವ ಬಗ್ಗೆ ಸೂಕ್ತ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೈಗೊಂಡ್ರುಹಳ್ಳಿ ಕೆರೆಗೆ ಹೊಂದಿಕೊಂಡಂತೆ ಇರುವ ಖಾಸಗಿ ಖಾಲಿ ಸ್ವತ್ತಿನಲ್ಲಿ ಬೇರೊಂದು ಸ್ಥಳದಿಂದ ಹೂಳನ್ನು ತಂದು ಹಾಕುತ್ತಿರುವುದನ್ನು ಸ್ಥಳ ತಪಾಸಣೆಯಲ್ಲಿ ಗಮನಿಸಿದರು,  ಕೆರೆಯ ದಂಡೆಗೆ ಸಾಕಷ್ಟು ಮಣ್ಣನ್ನು ಹಾಕುತ್ತಿರುವುದರಿಂದ ಕೆರೆಗೆ ಬರುವ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದರಿಂದ ಕೂಡಲೇ ಹೂಳನ್ನು ತೆಗೆಯುವಂತೆ ನೋಟೀಸ್ ನೀಡಿ ಕ್ರಮ ಕೈಗೊಳ್ಳಲು ಅಥವಾ ಪಾಲಿಕೆಯ ವತಿಯಿಂದ ತೆರವುಗೊಳಿಸಿ ತಗಲುವ ವೆಚ್ಚವನ್ನು ಸ್ವತ್ತಿನ ಮಾಲೀಕರಿಂದ ವಸೂಲಿ ಮಾಡುವಂತೆ ಜಂಟಿ ಆಯುಕ್ತರು (ಮಹದೇವಪುರ)ರವರಿಗೆ ಆಡಳಿತಗಾರರು ಸೂಚನೆ ನೀಡಿದರು.

ಮಂಗಮ್ಮನಪಾಳ್ಯ ವಾರ್ಡ್-190ರಲ್ಲಿ ಹಸಿ ಮತ್ತು ಒಣ ಕಸ ಸಂಗ್ರಹಣೆ ಪರಿಶೀಲನೆ:

ಬೊಮ್ಮನಹಳ್ಳಿ ವಲಯ ವ್ಯಾಪ್ತಿಯ ವಾರ್ಡ್ ಸಂಖ್ಯೆ-190ರ ಸೋಮಸುಂದರ ಪಾಳ್ಯದಲ್ಲಿ ಘನತ್ಯಜ್ಯ ನಿರ್ವಹಣೆ ನಿಯಮಗಳ ಅನುಸಾರ ಮನೆ ಮನೆಯಿಂದ ಹಸಿ ತ್ಯಾಜ್ಯ ಮತ್ತು ಒಣ ತ್ಯಾಜ್ಯವನ್ನು ಪ್ರತ್ಯೇಕವಾಗಿ ಸಂಗ್ರಹಣೆ ಮಾಡಿ ವಿಲೇವಾರಿ ಮಾಡುವ ವಸ್ತುಸ್ಥಿತಿಯನ್ನು ತಿಳಿಯಲು ಪರಿಶೀಲನೆ ನಡೆಸಿದರು. ಸದರಿ ವಾರ್ಡ್ ವ್ಯಾಪ್ತಿಯಲ್ಲಿ ಹಸಿ ಮತ್ತು ಒಣ ಕಸ ಬೇರ್ಪಡಿಸಿಕೆಯಲ್ಲಿ ಶೇ.90 ರಷ್ಟು ಸಾಧನೆ ಮಾಡಲಾಗಿರುವ ಬಗ್ಗೆ ವಿಶೇಷ ಆಯುಕ್ತರು(ಘನತ್ಯಾಜ್ಯ ನಿರ್ವಹಣೆ) ಮಾಹಿತಿ ನೀಡಿದರು.

ಪರಿಶೀಲಿನೆ ಸಮಯದಲ್ಲಿ ಹಸಿ ಕಸ ಮತ್ತು ಒಣ ಕಸಕ್ಕೆ ಪ್ರತ್ಯೇಕ ಆಟೋ ಟಿಪ್ಪರ್ ಬಳಸಲಾಗುತ್ತಿರುವುದು ಗಮನಿಸಲಾಯಿತು. ಹಸಿ ಕಸ ಸಂಗ್ರಹಣಾ ಆಟೋ ಟಿಪ್ಪರ್‌ನಲ್ಲಿ ಇತರೆ ತ್ಯಾಜ್ಯಗಳಾದ ಸ್ಯಾನಿಟರಿ ವೇಸ್ಟ್‌ಳನ್ನು ಸಂಗ್ರಹಿಸಲು ಪ್ರತ್ಯೇಕ ವ್ಯವಸ್ಥೆ ಕಲ್ಪಿಸಲು ಸೂಚಿಸಿದರು. ಸ್ಥಳೀಯ ನಾಗರೀಕರೊಂದಿಗೆ ಮಾತನಾಡಿ, ಹಸಿ ಕಸ ಸಂಗ್ರಹಣೆಗೆ ಆಟೋ ಟಿಪ್ಪರ್‌ಗಳು ಪ್ರತಿದಿನ ಬೆಳಗ್ಗೆ 7.30ಕ್ಕೆ ಮತ್ತು ಒಣ ಕಸ ಸಂಗ್ರಹಣೆಯು ವಾರಕ್ಕೆ ಎರಡು ಬಾರಿ ನಡೆಯುತ್ತಿರುವ ಬಗ್ಗೆ ಮಾಹಿತಿ ಪಡೆದರು. ಇದೇ ಸಂದರ್ಭದಲ್ಲಿ ನಾಗರೀಕರಲ್ಲಿ ಅರಿವು ಮೂಡಿಸಲು ಆಟೋ ಟಿಪ್ಪರ್‌ಗಳಲ್ಲಿ ಧ್ವನಿವರ್ದಕಗಳನ್ನು ಬಳಕೆ ಮಾಡುವ ಬಗ್ಗೆ ಸೂಚಿಸಿದರು.

ಹೆಚ್.ಎಸ್.ಆರ್ ಲೇಔಟ್ ವಾರ್ಡ್-174ರಲ್ಲಿ ಸ್ವಚ್ಛಾಗ್ರಹ ಕಲಿಕಾ ಕೇಂದ್ರ ಭೇಟಿ:

ವಾರ್ಡ್-174ರ ಹೆಚ್.ಎಸ್.ಆರ್ ಲೇಔಟ್‌ನ ಉದ್ಯಾನವನದಲ್ಲಿ ಸ್ವಚ್ಛಾಗ್ರಹ ಸಂಸ್ಥೆಯವರು ಘನತ್ಯಾಜ್ಯ ನಿರ್ವಹಣೆಯ ಸಂಬಂಧ ಹಸಿ ಕಸದಿಂದ ಗೊಬ್ಬರ ಉತ್ಪಾದನೆ, ಮನೆಯಲ್ಲಿಯೇ ಗೊಬ್ಬರ ಉತ್ಪಾದನೆ ಮಾಡುವ ಬಗ್ಗೆ ವಿವಿಧ ಮಾದರಿಗಳನ್ನು ಪ್ರದರ್ಶಿಸುವ  (Live demo) ಮುಖೇನ ನಾಗರೀಕರಲ್ಲಿ ಅರಿವು ಮೂಡಿಸಲು ಕಲಿಕಾ ಕೇಂದ್ರವನ್ನು ಸ್ಥಾಪಿಸಿದ್ದು, ಇದರ ಕಾರ್ಯನಿರ್ವಹಣೆಯನ್ನು ಪರಿಶೀಲಿಸಲಾಯಿತು. ಸದರಿ ಕಲಿಕಾ ಕೇಂದ್ರದಲ್ಲಿ ಪ್ರತಿನಿತ್ಯ ಸುಮಾರು 1.5 ಟನ್ ಹಸಿ ಕಸ ಸಂಗ್ರಹಣೆ ಮಾಡಿ ಗೊಬ್ಬರ ಉತ್ಪಾದನೆ ಮಾಡುತ್ತಿರುವ ಬಗ್ಗೆ ಮಾಹಿತಿ ನೀಡಿದರು. ಈ ಉದ್ಯಾನದಲ್ಲಿ ಇದೇ ಗೊಬ್ಬರವನ್ನು ಹಲವಾರು ಸಸ್ಯರಾಶಿಗಳನ್ನು ಬೆಳಸಿ

ಪೋಷಿಸಲಾಗುತ್ತಿರುವುದನ್ನು ಗಮನಿಸಲಾಯಿತು. ಇದರ ಜೊತೆಗೆ ಸದರಿ ಘಟಕದಲ್ಲಿ ಉತ್ಪಾದನೆಯಾಗುವ ಗೊಬ್ಬರವನ್ನು ಸದುಪಯೋಗಪಡಿಸಿಕೊಂಡು, ಆಯಾ ವಲಯ ವ್ಯಾಪ್ತಿಯಲ್ಲಿ ಗಿಡಗಳನ್ನು ಬೆಳಸುವಂತೆ ತೋಟಗಾರಿಕಾ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಲಿಕಾ ಕೇಂದ್ರವು ದಕ್ಷ ಘನತ್ಯಾಜ್ಯ ನಿರ್ವಹಣೆ ನಿಟ್ಟಿನಲ್ಲಿ ಗೊಬ್ಬರ ಉತ್ಪಾದಿಸಿ, ನಾಗರೀಕರಲ್ಲಿ ಅರಿವು ಮೂಡಿಸುತ್ತಿದ್ದು, ಈ ಪ್ರದೇಶದ ಮನೆಗಳಲ್ಲಿ ಗೊಬ್ಬರ ತಯಾರಿಸುತ್ತಿರುವ ಅಂಕಿ ಅಂಶಗಳನ್ನು ತಯಾರಿಸಿದಲ್ಲಿ ಈ ಮಾಹಿತಿಯನ್ನು ಪ್ರಚುರ ಪಡಿಸುವುದರಿಂದ ಪಾಲಿಕೆಯ ಇತರೆ ವಾರ್ಡ್ಗಳಲ್ಲಿ ಇದೇ ವ್ಯವಸ್ಥೆ ಅಳವಡಿಸಲು ಉಪಯೋಗವಾಗುವ ಬಗ್ಗೆ ಆಡಳಿತಗಾರರು ವಿವರಿಸಿದರು. ಘನತ್ಯಾಜ್ಯ ಸಂಸ್ಕರಣೆ ಬಗ್ಗೆ ಇನ್ನಷ್ಟು ಅರಿವು ಮೂಡಿಸಲು ಪಾಲಿಕೆ ವ್ಯಾಪ್ತಿಯ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಶಾಲೆಗಳ ಮಕ್ಕಳನ್ನು ಕಲಿಕಾ ಕೇಂದ್ರಕ್ಕೆ ಭೇಟಿ ಮಾಡಿಸುವ ವ್ಯವಸ್ಥೆ ಮಾಡಲು ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ) ರವರಿಗೆ ಆಡಳಿತಗಾರರು ಸೂಚಿಸಿದರು.

ಹಸಿ ತ್ಯಾಜ್ಯದಿಂದ ಗೊಬ್ಬರ ತಯಾರಿಸುವ ನಿಟ್ಟಿನಲ್ಲಿ ಕಲಿಕಾ ಕೇಂದ್ರವು ಉತ್ತಮ ನಿದರ್ಶನವಾಗಿದ್ದು, ಎಲ್ಲಾ ವಲಯ ಮತ್ತು ವಾರ್ಡ್ಗಳಲ್ಲಿ ಇಂತಹ ಕೇಂದ್ರಗಳನ್ನು ಸ್ಥಾಪಿಸುವ ಬಗ್ಗೆ ಮತ್ತು ಈ ಬಗ್ಗೆ ಅರಿವು ಮೂಡಿಸಲು ಸ್ವಯಂ ಸೇವಕರು, ಪಾಲಿಕೆಯ ಅಧಿಕಾರಿಗಳನ್ನು ಗುರುತಿಸಿ ಮಾಸ್ಟರ್ ಟ್ರೈನರ್ಸ್ ಗಳನ್ನು ರೂಪಿಸಿ ನಾಗರೀಕರು ಮನೆಯಲ್ಲಿಯೇ ಹಸಿ ತ್ಯಾಜ್ಯ ಸಂಸ್ಕರಣೆ ಮಾಡಲು ಇನ್ನೂ ಹೆಚ್ಚು ಅರಿವು ಮೂಡಿಸಲು ಕ್ರಮವಹಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದರು